# ಜ್ಞಾನಶಕ್ತಿ
ಮಾಸ ಪತ್ರಿಕೆ

JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003





ಸಂಪುಟ - 14 Reg. No. : KARBIL / 2005 / 16123 ಡಿಸೆಂಬರ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 12 ಪ್ರಕಟಣೆ : 29-12-2025


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಾರ್ಷಿಕೋತ್ಸವ














ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವವು ತಾರೀಕು 07-12-2025ನೇ ಆದಿತ್ಯವಾರ ವಿವಿಧ ಪಾರಾಯಣಗಳೊಂದಿಗೆ ಪ್ರಾರಂಭವಾಯಿತು. ಶ್ರೀ ಶಾರದಾಂಬ ಭಜನಾ ಮಂಡಳಿಯ ಭಜನಾ ಸೇವೆಯ ಬಳಿಕ ಶ್ರೀ ಸತ್ಯನಾರಾಯಣ ಪೂಜಾ ಸಂಕಲ್ಪವನ್ನು ವೇ। ಮೂ। ಪಾವಂಜೆ ಸುಬ್ರಹ್ಮಣ್ಯ ಭಟ್ ಪೂಜಾ ಯಜಮಾನರಾದ ಶ್ರೀ ಅನಿಲ್ ನೆಲ್ಲಿಕುಂಜೆ ಮತ್ತು ಶ್ರೀಮತಿ ಸವಿತ ದಂಪತಿಗಳ ಮೂಲಕ ನೆರವೇರಿಸಿದರು. ಹೂಜೋಡಣೆ, ಹತ್ತಿಯಿಂದ ಬತ್ತಿ ಮಾಡುವುದು ಮತ್ತು ರಂಗೋಲಿ ಸ್ಪರ್ಧೆಗಳು ವಿವಿಧ ವಿಭಾಗದಲ್ಲಿ ನಡೆದವು. ನಂದಿಕೂರ್ ಕ್ಲಿನಿಕಲ್ ಲ್ಯಾಬ್‌ನ ಡಾ. ಕೃಷ್ಣರಾಜ್ ಉಪಾಧ್ಯಾಯರವರು 'ದೇಹದಲ್ಲಿ ಸಂಭವಿಸುವ ರೋಗ, ರೋಗದ ಸ್ವರೂಪ, ಕಾರಣ, ಬೆಳವಣಿಗೆ, ಪರಿಣಾಮ' ವಿಷಯದ ಬಗ್ಗೆ ಮಾತನಾಡಿದರು. ಬೆಳಗ್ಗೆ ಗಂಟೆ 11-00ಕ್ಕೆ ಶ್ರೀ ಸಭಾದ 116ನೇ ವರ್ಷದ 'ಮಹಾಸಭೆ' ಆರಂಭವಾಯಿತು. ಪ್ರಾರ್ಥನೆ ಬಳಿಕ ಶ್ರೀ ಸಭಾದ ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಪಿ. ಉದಯ ಕುಮಾರ್ ರಾವ್ 2024-2025ನೇ ವರ್ಷದ ಆಡಳಿತ ಮಂಡಳಿಯ ವರದಿಯನ್ನು ಮಂಡಿಸಿ, ಮಹಾಸಭೆಯ ಅನುಮೋದನೆಯನ್ನು ಪಡೆದರು.

(2ನೇ ಪುಟಕ್ಕೆ ಮುಂದುವರಿಯುವುದು)

ವರದಿ : ಶ್ರೀಮತಿ ಜಯಂತಿ ವಿನೋದ್ ರಾವ್   ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರು

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### 'ಸ್ಕೋಲರ್ಸ್ ಡೇ - 2026

**ಭಾನುವಾರ 4, ಜನವರಿ 2026**

ಬೆಳಗ್ಗೆ ಗಂಟೆ 8-30ರಿಂದ 10-15 : ಉಪಾಹಾರ ಮತ್ತು ನೋಂದಾವಣೆ

ಬೆಳಗ್ಗೆ ಗಂಟೆ 10-30ರಿಂದ 11-00: ಉದ್ಘಾಟನಾ ಕಾರ್ಯಕ್ರಮ

ದೀಪ ಪ್ರಜ್ವಲನ

ಸ್ವಾಗತ ಭಾಷಣ :

ಡಾ. ಎ. ಪಿ. ಕೃಷ್ಣ

ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**SESSION I** ಬೆಳಗ್ಗೆ ಗಂಟೆ 11-00ರಿಂದ 11-30ರ ವರೆಗೆ

ಪ್ರಧಾನ ಭಾಷಣ : CA ನಂದಗೋಪಾಲ ಶೆಣೈ

President, World Konkani Centre

ವಿಷಯ : Thinking beyond, I, Me, Myself

**SESSION II** ಬೆಳಗ್ಗೆ ಗಂಟೆ 11-30ರಿಂದ ಮಧ್ಯಾಹ್ನ ಗಂಟೆ 12-00ರ ವರೆಗೆ

ಪ್ರಧಾನ ಭಾಷಣ : ಡಾ। ಪ್ರಶಾಂತ್ ಮೋಹನ್

Managing Director, Atharva Ortho Care, Surathkal

ವಿಷಯ : X to Z Change : Progress or Problem?

Moderation : ಶ್ರೀ ಇನ್ನಾ ಚಂದ್ರಕಾಂತ ರಾವ್

ಮಧ್ಯಾಹ್ನ ಗಂಟೆ 12-30ರಿಂದ 1-00ರ ವರೆಗೆ : ವಿದ್ಯಾರ್ಥಿ ವೇತನ ವಿತರಣೆ

ಧನ್ಯವಾದ ಸಮರ್ಪಣೆ : ಶ್ರೀ ನಾಗರಾಜ ಶರ್ಮ

ಮಧ್ಯಾಹ್ನ ಗಂಟೆ 1-00ರಿಂದ 2-00ರ ವರೆಗೆ : ಭೋಜನ

**ವಿಶೇಷ ಸೂಚನೆ**

- ಸ್ಕೋಲರ್‌ಶಿಪ್ ಪಡೆಯುವ ವಿದ್ಯಾರ್ಥಿಗಳು ಬೆಳಗ್ಗೆ ಗಂಟೆ 10-15ರ ಮೊದಲು ತಮ್ಮ ಹೆಸರನ್ನು ಕೌಂಟರ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.
- ಸಕಾಲದಲ್ಲಿ ಬಂದ ವಿದ್ಯಾರ್ಥಿಗಳಿಗೆ ಮಾತ್ರ ಸ್ಕೋಲರ್‌ಶಿಪ್‌ನ್ನು ಕೊಡಲಾಗುವುದು.

ಸೂಚನೆ : ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದ ದಿನದಂದು ಕ್ಲಪ್ತ ಸಮಯಕ್ಕೆ ತಲುಪಲು ಅಸಾಧ್ಯವೆಂದು ತೋರಿದಲ್ಲಿ, ನಮಗೆ *ಮುಂಚಿತವಾಗಿ ತಿಳಿಸಿದಲ್ಲಿ ಕಾರ್ಯಕ್ರಮದ ಹಿಂದಿನ ದಿನದ ರಾತ್ರಿಯ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಿಕೊಡಲಾಗುವುದು. (*ಮುಂಚಿತವಾಗಿ ತಿಳಿಸುವುದು ಕಡ್ಡಾಯ)

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.

• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 : 9343361618 e-mail : jnanashakthisss@gmail.com


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಾರ್ಷಿಕೋತ್ಸವ

(ಮೊದಲನೇ ಪುಟದಿಂದ)

ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಪರಿಶೋಧಿತ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಹಾಗೂ ಮುಂದಿನ ವರ್ಷದ ಅಂದಾಜು ಆಯ–ವ್ಯಯ ಪಟ್ಟಿಯನ್ನು ಮಂಡಿಸಿ ಅನುಮೋದನೆ ಪಡೆದರು. ಪುತ್ತೂರು ಶಿವಸದನ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿ ನಿಲಯ ಇದರ ಆಗು–ಹೋಗುಗಳ ಬಗ್ಗೆ ಹಾಗೂ ಸಾಲ ಮುಕ್ತಗೊಳಿಸಲು ಸಹಕಾರ ನೀಡಿದ ಸಕಲ ದಾನಿಗಳಿಗೆ ಧನ್ಯವಾದ ಸಲ್ಲಿಸಿದರು. ಅದೇ ರೀತಿ ಶ್ರೀ ಸುಬ್ರಹ್ಮಣ್ಯ ಸಭಾ ಟ್ರಸ್ಟ್‌ನ ಲೆಕ್ಕಪತ್ರಗಳನ್ನು ಮಂಡಿಸಲಾಯಿತು. ಸಭೆಯ ನಿರ್ದೇಶಕ ಶ್ರೀ ಮನೀಶ್ ರಾವ್ ಧನ್ಯವಾದ ಸಮರ್ಪಿಸಿದರು. ನಂತರ ಮಹಾಮಂಗಳಾರತಿ, ಪ್ರಸಾದ ವಿತರಣೆ ಮತ್ತು ಭೋಜನ ನಡೆಯಿತು.

ಮಧ್ಯಾಹ್ನದ ಬಳಿಕ ಶ್ರೀಮತಿ ಕರುಣ ರಾವ್ ಇವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಹರೀಶ್ ಕುಮಾರ್ ವಿ. ಡೈರೆಕ್ಟರ್ (ಟೆಕ್ನಿಕಲ್) ಮೆಸ್ಕಾಂ, ಮಂಗಳೂರು ಮತ್ತು ವಿದ್ವಾನ್ ಎಚ್. ರವಿ ಕುಮಾರ್, ಕುಂಜೂರು ಇವರನ್ನು ಸಭೆಗೆ ಶ್ರೀ ಅನಿಲ್ ನೆಲ್ಲಿಕುಂಜೆ ಮತ್ತು ಮಹಿಳಾ ವೇದಿಕೆಯ ಉಪಾಧ್ಯಕ್ಷೆ ಶ್ರೀಮತಿ ಪುಷ್ಪ ಶ್ರೀನಿವಾಸ್ ರಾವ್ ಪರಿಚಯಿಸಿದರು. ಸಭೆಯ ಪದಾಧಿಕಾರಿಗಳು ಅವರನ್ನು ಸನ್ಮಾನಿಸಿದರು.

ಬಹುಮಾನ ಪ್ರಯೋಜಕರಾದ ಶ್ರೀಮತಿ ಸ್ನೇಹಲತಾ ದಿವಾಕರ್ ರಾವ್ ಇವರು ವಿಜೇತ ಸ್ಪರ್ಧಿಗಳಿಗೆ ಬಹುಮಾನ ವಿತರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಸುಮನ ಕೃಷ್ಣ ತಂಡದವರಿಂದ ಸಮೂಹನೃತ್ಯ ಮತ್ತು ಶ್ರೀರಾಂ ಎಲ್ಲಂಗಳ ನಿರ್ದೇಶನದ “ಸ್ಟಾರ್ ಹೋಟೆಲ್ ಸಾಹುಕಾರ್” ತುಳು ಹಾಸ್ಯ ನಾಟಕ ಪ್ರಹಸನ ನಡೆಯಿತು. ಡಾ. ಬಿ. ವೈಷ್ಣವಿ ರಾವ್, ಬಜ್ಪೆ ಇವರಿಂದ “ಸಮುದ್ರ ಮಥನ” ಎಂಬ ಹರಿಕಥಾ ಸಂಕೀರ್ತನ ನಡೆಯಿತು. ತಬಲದಲ್ಲಿ ಬಿ. ವೈಭವಿ ರಾವ್, ಬಜ್ಪೆ ಮತ್ತು ಹಾರ್ಮೋನಿಯಂನಲ್ಲಿ ಶ್ರೀ ಗೋಪಾಲಕೃಷ್ಣ ಉಪಾಧ್ಯಾಯ ಸಹಕರಿಸಿದರು. ಮಹಿಳಾ ವೇದಿಕೆಯ ಜೊತೆಕಾರ್ಯದರ್ಶಿ ಶ್ರೀಮತಿ ಅಕ್ಷತ ಮನೀಷ್ ಇವರು ಹರಿಕಥಾ ಕಲಾವಿದರನ್ನು ಸಭೆಗೆ ಪರಿಚಯಿಸಿದರು.

ಶ್ರೀ ರಘುವೀರ್ ಪೆರ್ಡೂರ್ ಇವರು ಕಾರ್ಯಕ್ರಮದ ಫೋಟೋ ಮತ್ತು ವೀಡಿಯೋವನ್ನು ಒದಗಿಸಿದರು. ತೀರ್ಪುಗಾರರಾಗಿ ಶ್ರೀ ನಾಗರಾಜ ಶರ್ಮ, ಶ್ರೀ ರಘುವೀರ್ ಪೆರ್ಡೂರ್, ಶ್ರೀ ಜನಕರಾಜ್, ಶ್ರೀಮತಿ ಶುಭಲಕ್ಷ್ಮಿ ರವಿಕಿರಣ್, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಡಾ. ಜಯಲಕ್ಷ್ಮಿ ರಾವ್ ಸಹಕರಿಸಿದರು. ಶ್ರೀ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಮತ್ತು ಮಹಿಳಾ ವೇದಿಕೆ ಜೊತೆ ಕಾರ್ಯದರ್ಶಿ ಶ್ರೀಮತಿ ಶುಭಲಕ್ಷ್ಮೀ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಸಭಾ ಪದಾಧಿಕಾರಿಗಳು, ನಿರ್ದೇಶಕರು ಭೋಜನ ವ್ಯವಸ್ಥೆಯಲ್ಲಿ ಸಹಕರಿಸಿದರು. ಸಭಾದ ಅಧ್ಯಕ್ಷ, ಯುವವೇದಿಕೆಯ ಅಧ್ಯಕ್ಷ ಶ್ರೀ ಜನಕರಾಜ್ ಮತ್ತು ಪದಾಧಿಕಾರಿಗಳು, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಜಯಂತಿ ವಿ. ರಾವ್ ಮತ್ತು ಪದಾಧಿಕಾರಿಗಳು ವ್ಯವಸ್ಥೆಗಳಲ್ಲಿ ಸಹಕರಿಸಿದರು. ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಶಕುಂತಲ ವಿಜಯ ಕುಮಾರ್ ಧನ್ಯವಾದ ಸಮರ್ಪಣೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಪುತ್ತೂರಿನಲ್ಲಿ ಸುಸಜ್ಜಿತ ‘ಶಿವಸದನ’

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ‘ಶಿವಸದನ’ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 60ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598

## ಅಪಾರ ಕೀರ್ತಿಗಳಿಸಿ



ಬೆಂಗಳೂರಿನ ಶ್ರೀಮತಿ ಅನುಪಮಾ ಮತ್ತು ಶ್ರೀ ಅರುಣ್ ನಂದಾವರ ದಂಪತಿಗಳ ಪುತ್ರಿ **ಕು। ಅದಿತಿ ಎನ್.ಕೆ.** ಇವರು ಜೈನ್ ವಿಶ್ವವಿದ್ಯಾಲಯವು ನಡೆಸಿದ M.Sc. (Molecular Science and Stem Cell Technology) ಪದವಿಯಲ್ಲಿ ತೃತೀಯ ಶ್ರೇಣಿ (3rd Rank) ಪಡೆದಿರುತ್ತಾರೆ.

**1. ಅಣು ವಿಜ್ಞಾನ** (Molecular Science) : ಇದು ಜೀವಕೋಶಗಳ ಒಳಗಿನ ಜೈವಿಕ ಪ್ರಕ್ರಿಯೆಗಳನ್ನು ಅಣುಗಳ ಮಟ್ಟದಲ್ಲಿ (Molecular level) ಅಧ್ಯಯನ ಮಾಡುವ ವಿಜ್ಞಾನವಾಗಿದೆ. ಇದರಲ್ಲಿ ಮುಖ್ಯವಾಗಿ DNA, RNA ಮತ್ತು ಪ್ರೋಟೀನ್‌ಗಳ ರಚನೆ ಹಾಗೂ ಕಾರ್ಯವೈಖರಿಯನ್ನು ಸಂಶೋಧಿಸಲಾಗುತ್ತದೆ.

**2. ಮೂಲಕೋಶ ತಂತ್ರಜ್ಞಾನ** (Stem Cell Technology) : ಮೂಲಕೋಶಗಳು ಅಥವಾ ಸ್ಟೆಮ್ ಸೆಲ್‌ಗಳು ನಮ್ಮ ದೇಹದ ವಿಶೇಷ ಜೀವಕೋಶಗಳಾಗಿವೆ. ಇವು ದೇಹದ ಯಾವುದೇ ಇತರ ಅಂಗಾಂಶಗಳಾಗಿ (ಉದಾಹರಣೆಗೆ ಸ್ನಾಯು, ರಕ್ತ ಅಥವಾ ನರಕೋಶಗಳು) ಬದಲಾಗುವ ಸಾಮರ್ಥ್ಯವನ್ನು ಹೊಂದಿರುತ್ತವೆ.

**ಉಪಯೋಗ :** ಸುಟ್ಟ ಗಾಯಗಳು, ಬೆನ್ನುಮೂಳೆಯ ಗಾಯ, ಮಧುಮೇಹ ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಈ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಹಾನಿಗೊಳಗಾದ ಅಂಗಾಂಶಗಳನ್ನು ಪುನರುತ್ಪಾದಿಸಲು (Regenerative Medicine) ಇದು ಅತ್ಯಂತ ಪ್ರಮುಖವಾಗಿದೆ. **ಈ ಪದವಿಯ ಮಹತ್ವ :** ಈ ವಿಷಯದಲ್ಲಿ ಪದವಿ ಪಡೆದವರು ವೈದ್ಯಕೀಯ ಸಂಶೋಧನೆ, ಔಷಧ ತಯಾರಿಕೆ (Pharmaceuticals) ಮತ್ತು ಜೆನೆಟಿಕ್ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಉತ್ತಮ ಭವಿಷ್ಯವನ್ನು ಹೊಂದಿರುತ್ತಾರೆ. ಕು। ಅದಿತಿ ಅವರು ಇಂತಹ ಅತ್ಯಾಧುನಿಕ ಮತ್ತು ಸಂಕೀರ್ಣವಾದ ವಿಷಯದಲ್ಲಿ ಶ್ರೇಣಿ ಪಡೆದಿರುವುದು ನಿಜಕ್ಕೂ ಹೆಮ್ಮೆಯ ವಿಷಯ.

ಈ ಅದ್ಭುತ ಸಾಧನೆ ಮಾಡಿದ ಅದಿತಿ ಹಾಗೂ ಅವರ ಪೋಷಕರಿಗೆ ಹಾರ್ದಿಕ ಅಭಿನಂದನೆಗಳು. ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಯು ಅವಳಿಗೆ ಉತ್ತಮ ಭವಿಷ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.




**ಡಾ। ವಸುಂಧರ ಯು.** ಇವರು ರಾಜೀವ ಗಾಂಧಿ ವಿಶ್ವವಿದ್ಯಾಲಯದ ಹೋಮಿಯೋಪತಿ ಬಿ.ಎಚ್.ಎಂ.ಎಸ್. ಮೆಡಿಸಿನ್‌ನಲ್ಲಿ ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಡೆದಿದ್ದಾರೆ. ಇವರು ಶ್ರೀ ಯು. ಜಿ. ಸುರೇಶ್ ರಾವ್ ಮತ್ತು ಶ್ರೀಮತಿ ವತ್ಸಲ ಇವರ ಪುತ್ರಿ.



**ಕು। ಮಾಧುರ್ಯ** ಅಂತಿಮ ಬಿ.ಕಾಂ. ಪರೀಕ್ಷೆಯಲ್ಲಿ ಶೇ. 96 ಅಂಕಗಳನ್ನು ಗಳಿಸಿದ್ದಾಳೆ. ಇವಳು ಪೂವಂದೂರು ಶ್ರೀ ದಿನೇಶ ರಾವ್ ಮತ್ತು ಶ್ರೀಮತಿ ಸುಮನ ದಂಪತಿಗಳ ಪುತ್ರಿ.

## ಸಂಶೋಧನೆಯ ಬೆಳಕಿನಲ್ಲಿ ಡಾ. ಅಂಕಿತಾ ರಾವ್ ನಮ್ಮ ಹೆಮ್ಮೆ



ನಿಟ್ಟೆ ಕೆಮ್ಮಣ್ಣಿನ ಪ್ರಕಾಶ್ ರಾವ್ ಮತ್ತು ಮೀರಾ ಪಿ. ರಾವ್ ಅವರ ಪುತ್ರಿ ಅಂಕಿತಾ ರಾವ್ ಅವರು ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MIT), ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಯೂನಿವರ್ಸಿಟಿ (MAHE)ಯಿಂದ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇವರು “Feasibility study of combination of electrode and electrolyte materials for supercapacitors” ಎಂಬ ಪಿ.ಎಚ್.ಡಿ. ಸಂಶೋಧನಾ ಪ್ರಬಂಧದ ಕುರಿತು ಮಾಡಿದ ಸಂಶೋಧನೆಗೆ ಈ ಗೌರವ ದೊರೆತಿದೆ. ಪ್ರಸ್ತುತ ಅವರು ನಿಟ್ಟೆ ವಿದ್ಯಾಸಂಸ್ಥೆಯ ರೋಬೋಟಿಕ್ಸ್ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ವಿಯೆಟ್ನಾಂನಲ್ಲಿ ನಡೆದ ಅಂತಿಮ ಸುತ್ತಿನ ಡ್ಯಾನ್ಸ್ ಮತ್ತು ಜೂನಿಯರ್ ಮಾಡೆಲ್ ಶೋನಲ್ಲಿ ಬಾಲಪ್ರತಿಭೆ ಮಾಸ್ಟರ್ ಋಷಭ್ ರಾವ್



ವಿಯೆಟ್ನಾಂನಲ್ಲಿ ನಡೆದ ಅಂತಿಮ ಸುತ್ತಿನ ಡ್ಯಾನ್ಸ್ ಮತ್ತು ಜೂನಿಯರ್ ಮಾಡೆಲ್ ಶೋನಲ್ಲಿ ಬಾಲಪ್ರತಿಭೆ ಮಾಸ್ಟರ್ ಋಷಭ್ ರಾವ್ ಅವರು ಪ್ರಥಮ ಸ್ಥಾನವನ್ನು ಪಡೆದು ನಮ್ಮ ಸ್ಥಾನಿಕ ಸಮಾಜಕ್ಕೆ ಮತ್ತು ನಮ್ಮ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಇವರು ಸ್ಥಾನಿಕ ಸಮಾಜದ ಶ್ರೀ ರಕ್ಷಿತ್ ರಾವ್ ಕೆ. ಮತ್ತು ಶ್ರೀಮತಿ ಅಶ್ವಿನಿ ಅವರ ಪುತ್ರ. ಇವರ ಕಲಾಸಾಧನೆಯನ್ನು ಗುರುತಿಸಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು, ನಾಡಹಬ್ಬದ ದಿನದಂದು ಸಭಾದ ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಮತ್ತು ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಜಯಂತಿ ವಿ. ರಾವ್ ಮತ್ತು ಪದಾಧಿಕಾರಿಗಳು, ಯುವ ವೇದಿಕೆಯ ಅಧ್ಯಕ್ಷ ಶ್ರೀ ಜನಕರಾಜ್ ಮತ್ತು ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಸನ್ಮಾನಿಸಲಾಯಿತು.


## 2025ರ ದತ್ತಿನಿಧಿ ಪ್ರಶಸ್ತಿ ಪುರಸ್ಕೃತರು – ಶ್ರೀ ದೇವದಾಸ ರಾವ್ ಕೂಡ್ಲಿ



ಬಡಗುತಿಟ್ಟು : ಬಾರ್ಕೂರಿನ ಹೇರಾಡಿಯ ರಂಗನಕೆರೆಯ ಮದ್ದಳೆಗಾರ ದೇವದಾಸ ರಾವ್ ಕೂಡ್ಲಿ 1959ರಲ್ಲಿ ನಾಗಪ್ಪಯ್ಯ ಕೂಡ್ಲಿ – ಗಿರಿಜಮ್ಮ ಅವರಿಗೆ ಉಳ್ಳೂರಿನಲ್ಲಿ ಜನಿಸಿ, 1975ರಲ್ಲಿ ಯಕ್ಷಗಾನ ಕೇಂದ್ರ ಉಡುಪಿಯಲ್ಲಿ ಯಕ್ಷಶಿಕ್ಷಣ ಪಡೆದರು. ಕಮಲಶಿಲೆ, ಮಾರಣಕಟ್ಟೆ, ಉಪ್ಪಿನಕುದ್ರು, ಗೊಂಬೆಯಾಟ ಮೇಳಗಳಲ್ಲಿ ಮದ್ದಳೆಗಾರರಾಗಿ ತಿರುಗಾಟ ನಡೆಸಿ, ಹೆಗ್ಗೋಡು ನೀನಾಸಂ, ಮೈಸೂರಿನ ರಂಗಾಯಣ ತಂಡದಲ್ಲಿದ್ದರು. ಗುಣವಂತೆ, ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಗುರುಗಳಾಗಿ ಸೇವೆ ಸಲ್ಲಿಸಿದ್ದು ಪ್ರಸ್ತುತ ವಡ್ಡರ್ಸೆ ಕಲಾರಂಗ, ತೆಕ್ಕಟ್ಟೆ ಯಶಸ್ವಿ ಕಲಾವೃಂದದಲ್ಲಿ ಗುರುಗಳಾಗಿದ್ದಾರೆ. ಉಡುಪಿ ಯಕ್ಷಗಾನ ಕೇಂದ್ರದ ಬ್ಯಾಲೆಯಲ್ಲಿ 19 ವರ್ಷ ಮದ್ದಳೆಗಾರರಾಗಿದ್ದರು.




## ಸ್ಥಾನಿಕ ಬ್ರಾಹ್ಮಣ ವಧೂವರರ ಬೃಹತ್ ಸಮಾವೇಶ



ದಿನಾಂಕ : 24, 25 ಜನವರಿ 2026 ❖ ಸ್ಥಳ : 'ಶಿವಕೃಪಾ ಸಭಾಭವನ'
ಕಲ್ಲಾರೆ ಶ್ರೀಗುರು ರಾಘವೇಂದ್ರ ಮಠದ ಬಳಿ, ಪುತ್ತೂರು

**ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು, ದ. ಕ.**
ಇದರ ಆಯೋಜನೆಯಲ್ಲಿ
**ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘ (ರಿ.), ಪುತ್ತೂರು**
ಇದರ ಆತಿಥ್ಯದಲ್ಲಿ

**'ಸ್ಥಾನಿಕ ಬ್ರಾಹ್ಮಣ ಸಮಾವೇಶ - 2026'**

ನಡೆಯಲಿದೆ. ಇದರ ಜೊತೆಗೆ **ವಧೂವರರ ಬೃಹತ್ ಸಮಾವೇಶ** ಜನವರಿ 24, 25ರಂದು ಎರಡೂ ದಿನವು ನಡೆಯಲಿದೆ. ನಮ್ಮ ಸ್ಥಾನಿಕ ಸಮಾಜದ ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾವೇಶದಲ್ಲಿ ಭಾಗಿಯಾಗಿ ಇದರ ಸದುಪಯೋಗವನ್ನು ಪಡೆದುಕೊಳ್ಳಿರಿ.

ಹೆಚ್ಚಿನ ವಿವರಗಳಿಗೆ : **ಚೇತನ್ ಶರ್ಮ ಮಂಗಳೂರು** ✆ : 9844187083 / 9108875573

*Best wishes from*

**Kokradi Chandrashekhar Rao**
Retd. Master
'Ravikirana', Kokrady Village & Post
Moodabidre Tq., 574 242



## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುದ್ರೆ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : **9880968032 / 0824-2982095**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755
ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ
ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು
✆ : 8904801404
ಮುಲ್ಕಿ : ಮಾತಾ ರೆಸಿಡೆನ್ಸಿ, ಹಳೆಯಂಗಡಿ, ಮುಲ್ಕಿ ✆ : 9980638274

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |

ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ **9.5%**
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು

**ನಿಮ್ಮ ಹೂಡಿಕೆಗಳು**
ಕೇವಲ **88** ತಿಂಗಳಲ್ಲಿ
**ದ್ವಿಗುಣವಾಗುವುದು**

**ಲಕ್ಷಾಧೀಶ ಯೋಜನೆ**
ರೂ. **1,00,000/-**


ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ

**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ **6,800/-**ರ ತನಕ


ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : **9972989678**
**9448104174**

**ರವಿಕಿರಣ್ ಕ್ಯೊಲ**, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
**2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ**
**ಪುತ್ತೂರು ತಾಲೂಕು, ದ. ಕ., 574 241**

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘ (ರಿ.), ಸುಳ್ಯ – 'ಸ್ಕಂದ ಸೇವಾವಾಹಿನಿ' ಲೋಕಾರ್ಪಣೆ




ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘ (ರಿ.), ಸುಳ್ಯ ಇದರ ಸೇವಾ ಅಂಗಸಂಸ್ಥೆಯಾದ "ಸ್ಕಂದ ಸೇವಾವಾಹಿನಿ"ಯನ್ನು ಇಂದು ಲೋಕಾರ್ಪಣೆ ಮಾಡಲಾಯಿತು. ಶ್ರೀ ಸುಬ್ರಹ್ಮಣ್ಯ ದೇವಾಲಯ, ಕಾಂತಮಂಗಲ, ಸುಳ್ಯ ಇಲ್ಲಿ ನಡೆದ ಷಷ್ಠಿ ಸಮಾರಂಭದಲ್ಲಿ ದೇವಾಲಯದ ಮೊಕ್ತೇಸರರಾದ ಶ್ರೀ ಬಯಂಬು ಭಾಸ್ಕರ ರಾಯರು ನೂತನ ಸಂಸ್ಥೆಯ ಬಗ್ಗೆ ಮಾಹಿತಿ ನೀಡಿ ಪ್ರಾರ್ಥನೆ ನೆರವೇರಿಸಿದರು. ಶ್ರೀ ಚೆನ್ನಕೇಶವ ದೇವಸ್ಥಾನದ ಮೊಕ್ತೇಸರರಾದ ಡಾ। ಹರಪ್ರಸಾದ್ ತುದಿಯಡ್ಕರವರು, ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸೇವಾವಾಹಿನಿಯ ಸಂಯೋಜಕರು, ಸಂಚಾಲಕರು, ಕಾರ್ಯಕರ್ತರು ಉಪಸ್ಥಿತರಿದ್ದರು. ದೇವರಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಲೋಕಾರ್ಪಣೆ ಸಂಪನ್ನಗೊಳಿಸಲಾಯಿತು. ಎಲ್ಲರ ಸಹಕಾರದೊಂದಿಗೆ ಸಂಸ್ಥೆಯು ಯಶಸ್ವಿಯಾಗಿ ಅಭಿವೃದ್ಧಿ ಆಗಲೆಂದು ಶ್ರೀದೇವರಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು.



ಪಡುಬಿದ್ರೆ ಶ್ರೀ ಪ್ರಸನ್ನಪಾರ್ವತಿ ಬಾಲಗಣಪತಿ ದೇವಸ್ಥಾನದ ಬಳಿ ನಿರ್ಮಾಣವಾಗುತ್ತಿರುವ ವೇದಿಕೆಗೆ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಉಪಾಧ್ಯಕ್ಷರಾದ ಶ್ರೀಮತಿ ಸುಮಂಗಲಾ ಪ್ರಭಾಕರ್ ಮತ್ತು ಶ್ರೀ ಕರುಣಾಕರ್ ರಾವ್ ಬೆಳ್ಳೆ ಇವರ ಸಹಕಾರದಿಂದ ರೂ. 25,000/– ದೇಣಿಗೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ನೀಡಲಾಯಿತು. ಇವರಿಗೂ ಸಂಘದ ಎಲ್ಲಾ ಪದಾಧಿಕಾರಿಗಳಿಗೂ ಮತ್ತು ಸದಸ್ಯರಿಗೂ ಶ್ರೀ ಪ್ರಸನ್ನಪಾರ್ವತಿ ಬಾಲಗಣಪತಿ ದೇವರು ಆರೋಗ್ಯ, ಆಯುಷ್ಯ, ಸಂಪತ್ತು ನೀಡಲೆಂದು ದೇವರಲ್ಲಿ ಪ್ರಾರ್ಥಿಸುವ –

**– ಆಡಳಿತ ಮಂಡಳಿ**








ಪತ್ರಿಕೆಗೆ ಶುಭ ಬಯಸುವ–

**Dr. Jayalakshmi Devi**
**Dr. Jaganmohan, Smt. Asha Mohan**
**Akarsh M. Rao**
**Konchadi, Mangalore - 575 008**

## ಶ್ರೀ ದೇವರ ದಿವ್ಯ ಸನ್ನಿಧಿಯಿಂದ ಅಂತರಂಗದ ವಿಶೇಷ ಕೃತಜ್ಞತೆಗಳು



ದೇವಳದ ಆವರಣದಲ್ಲಿ ನಿರ್ಮಾಣವಾಗುತ್ತಿರುವ ನೂತನ ಮತ್ತು ಸುಸಜ್ಜಿತ "ಪ್ರಿಯಚಂದ್ರ ಸಭಾಂಗಣ"ದ ಪವಿತ್ರ ಕಾರ್ಯಕ್ಕೆ ವಿಮಲಮ್ಮ ಮತ್ತು ಇನ್ನಾ ದಿನೇಶ್ ರಾವ್ ಸ್ಮರಣಾರ್ಥ ಶ್ರೀಮತಿ ಸುಪ್ರಿಯ ಮತ್ತು ಶ್ರೀ ಇನ್ನಾ ಚಂದ್ರಕಾಂತ ರಾವ್ ಇವರು ರೂಪ್ಯಾ 10,00,000/– (ರೂಪ್ಯಾ ಹತ್ತು ಲಕ್ಷ)ಗಳ ಉದಾರ ದೇಣಿಗೆಯನ್ನು ಅರ್ಪಿಸಿರುತ್ತಾರೆ.

ಭಕ್ತರ ಕೋರಿಕೆಗಳನ್ನು ಈಡೇರಿಸುವ ನಮ್ಮ ಶ್ರೀ ಬಾಲಗಣಪತಿ ಮತ್ತು ಜಗನ್ಮಾತೆಯಾದ ಶ್ರೀ ಪ್ರಸನ್ನ ಪಾರ್ವತಿ ದೇವಿಯಲ್ಲಿ ದಾನಿಗಳಾದ ಶ್ರೀಮತಿ ಸುಪ್ರಿಯ ಮತ್ತು ಶ್ರೀ ಇನ್ನಾ ಚಂದ್ರಕಾಂತ ರಾವ್ ಹಾಗೂ ಅವರ ಸಮಸ್ತ ಕುಟುಂಬವನ್ನು ಸದಾ ಹರಸಲಿ, ನಿಮ್ಮ ಮನಸ್ಸಿನ ಎಲ್ಲ ಸದಾಶಯಗಳು ಈಡೇರಲಿ, ಸಮೃದ್ಧಿ, ಶಾಂತಿ ಮತ್ತು ನೆಮ್ಮದಿಯೊಂದಿಗೆ ನೀವು ಶತಾಯುಷಿಗಳಾಗಿ ಬಾಳಲಿ ಎಂದು ಪ್ರಾರ್ಥಿಸುತ್ತೇವೆ.

**ಆಡಳಿತ ಮಂಡಳಿ, ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ (ರಿ.), ಪಡುಬಿದ್ರೆ**

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

**ರಾಮಾ ಆಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

Prop. : SUDHAKAR BELLE
: 9845193103/ 9481563103
**KARAN DIGITAL STUDIO**
Sadasukh Building, Nr. Postoffice, Padubidri - 574 111
Opp. Busstand Belman
All Marriage & Other functions Photography & Videography Available

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ –

**ಕೆ. ಆರ್. ಉಪಾಧ್ಯಾಯ**
**ಮಂಗಳೂರು**

# ತಾರೀಕು 07–12–2025ನೇ ರವಿವಾರ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಡಾ. ಎ. ಪಿ. ಕೃಷ್ಣ ಅವರ ಭಾಷಣದ ಸಾರಾಂಶ

ಆಹ್ವಾನಿಸಿ, ಆವಾಹಿಸಿ ಕಲಶಮಧ್ಯದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ಲಕ್ಷ್ಮೀನಾರಾಯಣ ದೇವರಿಗೆ ಭಕ್ತಿಪೂರ್ವಕ ನಮಿಸುತ್ತಾ ಶೃಂಗೇರಿ ಶ್ರೀ ಶಾರದಾ ಪೀಠಾಧ್ಯಕ್ಷರುಗಳಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಮತ್ತು ಶ್ರೀ ಶ್ರೀ ವಿಧುಶೇಖರ ಭಾರತಿ ಸ್ವಾಮಿಗಳವರ ಪಾದಾರವಿಂದಕ್ಕೆ ಪ್ರಣಾಮಗಳನ್ನು ಸಲ್ಲಿಸಿ, ತಮ್ಮೆಲ್ಲರನ್ನು ಈ ಮಹಾಸಭೆಗೆ ಸ್ವಾಗತಿಸಲು ಸಂತೋಷಪಡುತ್ತೇನೆ. ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷನ ನೆಲೆಯಲ್ಲಿ – ನಮ್ಮ ದೇಶದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಮಾತಿನಂತೆ ಶ್ರೀ ಸುಬ್ರಹ್ಮಣ್ಯ ಸಭಾದ ಪ್ರಧಾನ ಸೇವಕನಾಗಿ ನಿಮ್ಮ ಮುಂದೆ ನಿಲ್ಲಲು ಹೆಮ್ಮೆ ಮತ್ತು ಗರ್ವಪಡುತ್ತೇನೆ. ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಒಂದು ಸಣ್ಣ ಸಂಸ್ಥೆಯಲ್ಲ. ಶತಮಾನಗಳಷ್ಟು ಹಿರಿದಾದ ಭವ್ಯಪರಂಪರೆಯ ನಮ್ಮ ಈ ಸುಬ್ರಹ್ಮಣ್ಯ ಸಭೆಯು ಇಂದು ಬೆಳೆದು ಹೆಮ್ಮರವಾಗಿ ಹಲವಾರು ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ಹಾಗೂ ಆಶ್ರಯಧಾಮವಾಗಿ ಹೂ–ಹಣ್ಣು, ನೆರಳನ್ನು ನೀಡುತ್ತಿದೆ. ಕೆಲವು ದಶಕಗಳಿಂದ ರಾಜಕೀಯ ಹಾಗೂ ಸಾಮಾಜಿಕ ಕಾರಣಗಳಿಂದ ನಮ್ಮ ಸಮಾಜವು ಅತ್ಯಂತ ದಮನಕ್ಕೆ ಒಳಗಾಗಿತ್ತು. ನಮ್ಮ ಸ್ಥಾನಿಕ ಸಮಾಜವು ದುಸ್ಥಿತಿಗೆ ಹಾಗೂ ಅಧಃಪತನದ ಅಂಚಿಗೆ ತಳ್ಳಲ್ಪಟ್ಟಿತ್ತು.

ಆ ಸ್ಥಿತಿಯಿಂದ ಮೇಲೆದ್ದು ಬರಬೇಕು ಎಂಬ ನಿಶ್ಚಯ, ದಾರ್ಢ್ಯತೆ ನಮ್ಮ ಹಿರಿಯರಲ್ಲಿ ಇತ್ತು. ಸಮಾಜವನ್ನು ಮೇಲೆತ್ತಲು ಇರುವುದು ಒಂದೇ ದಾರಿ – ಅದುವೇ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವುದು ಎಂದು ನಿರ್ಧರಿಸಿದರು. ಇದಕ್ಕೆ ಪೂರಕವಾಗಿ ಕುಡ್ಬಿ ಭುಜಂಗ ರಾವ್‌ರವರ ಕೊಡುಗೆ ಅಪಾರ. ಮಂಗಳೂರಿನ ಕೇಂದ್ರ ಸ್ಥಳದಲ್ಲಿ ಒಂದು ನಿವೇಶನವನ್ನು (ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್) ಸಮಾಜಕ್ಕೆ ಉಚಿತವಾಗಿ ಒದಗಿಸಿಕೊಟ್ಟರು. ಮುಂದೆ ಅಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿ ಒಂದು ವಸತಿನಿಲಯವನ್ನು ಸ್ಥಾಪಿಸಲಾಯಿತು. ಈ ಮೂಲಕ ದೂರ ದೂರ ಹಳ್ಳಿಗಳಲ್ಲಿರುವ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸದ ಅವಕಾಶ ದೊರೆಯಿತು.

ಅಲ್ಲದೆ ಉದಾರಿಗಳ ನೆರವಿನಿಂದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ವ್ಯವಸ್ಥೆಯನ್ನು ಮಾಡಲಾಯಿತು. ಶತಾಯುಷಿ ಕೀರ್ತಿಶೇಷ ಡಾ. ಎನ್. ವಿ. ಉಪಾಧ್ಯಾಯರು ಬಹಳ ವರ್ಷಗಳ ಕಾಲ ಇದರ ಜವಾಬ್ದಾರಿಯನ್ನು ವ್ಯವಸ್ಥಿತವಾಗಿ ನಿರ್ವಹಿಸುತ್ತಿದ್ದರು. ಇದರಿಂದ ಹಲವಾರು ಬಡ ವಿದ್ಯಾರ್ಥಿಗಳು ವಿದ್ಯಾರ್ಜನೆಯ ಕನಸುಗಳನ್ನು ಪೂರೈಸಿ ಕೊಂಡರು. ಉತ್ತಮ ಉದ್ಯೋಗ ಪಡೆದು ತಮ್ಮ ಕುಟುಂಬಕ್ಕೆ ಆಸರೆಯಾದರು. ಇಂದು ನಾವು ಇತರ ಸಮಾಜದವರೊಂದಿಗೆ ಸರಿಸಮವಾಗಿ ನಿಲ್ಲುವ ಮಟ್ಟಿಗೆ ಬೆಳೆದೆವು. ಶ್ರೀ ಸುಬ್ರಹ್ಮಣ್ಯ ಸಭಾದ ಎಲ್ಲಾ ಬೆಳವಣಿಗೆಗೆ ಭದ್ರ ಬುನಾದಿಯನ್ನು ಹಾಕಿದ ಈ ಎಲ್ಲಾ ಮಹನೀಯರಿಗೆ, ಇವರ ದೂರದೃಷ್ಟಿಕೋನ, ಮಾರ್ಗದರ್ಶನವನ್ನು ನೆನಪಿಸಿಕೊಳ್ಳುತ್ತಾ, ಗೌರವಿಸುತ್ತಾ ಅವರಿಗೆ ನಮ್ಮ ಪ್ರಣಾಮಗಳು, ವಂದನೆಗಳು.

ನಮ್ಮ ಕುಟುಂಬವು 1990ರ ದಶಕದ ಪೂರ್ವಾರ್ಧದಲ್ಲಿ ಮಂಗಳೂರಿಗೆ ನಮ್ಮ ವಸತಿಯನ್ನು ಬದಲಿಸಿದೆವು. ಒಂದು ಬಾರಿ ಶ್ರೀ ಸುಬ್ರಹ್ಮಣ್ಯ ಸಭಾದ ಹಳೆಯ ಕಟ್ಟಡದಲ್ಲಿ ನಡೆಯುತ್ತಿದ್ದ ವಾರ್ಷಿಕ ಮಹಾಸಭೆಯಲ್ಲಿ ನಾನೂ ಭಾಗವಹಿಸಿದ್ದೆ. ಸಭಾದ ಕಾರ್ಯಕ್ರಮಗಳ ಬಗ್ಗೆ ಪ್ರಶಂಸನೆಯ ಮಾತುಗಳನ್ನು ಆಡಿದ್ದೆ. ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ನೀಡುವಂತೆ ಸಲಹೆಯನ್ನೂ ಕೊಟ್ಟಿದ್ದೆ. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆಯವರು ನನ್ನ ಸಲಹೆಯನ್ನು ದಾಖಲಿಸಿದ್ದಲ್ಲದೆ, ನನ್ನನ್ನು ಆಡಳಿತ ಮಂಡಳಿಯ ಸದಸ್ಯನನ್ನಾಗಿಯೂ ಸೇರ್ಪಡೆಗೊಳಿಸಿದರು. ಅಂದಿನಿಂದ ಇಂದಿನವರೆಗೆ ನಾನು ವಿದ್ಯಾಭ್ಯಾಸ ಸಮಿತಿಯ ಅಧ್ಯಕ್ಷನಾಗಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಿದ್ದೇನೆ ಎಂಬ ಆತ್ಮತೃಪ್ತಿ ನನಗಿದೆ.

ನನಗೆ ನಾಲ್ಕು ಜನ ಅಕ್ಕಂದಿರು ಹಾಗೂ ಒಬ್ಬ ಅಣ್ಣ. ಕೂಡುಕುಟುಂಬದಲ್ಲಿ ಬೆಳೆದ ನನಗೆ ಶ್ರೀ ಸಭಾದಲ್ಲಿ ಹಲವಾರು ಅಕ್ಕಂದಿರು ಮತ್ತು ಅಣ್ಣಂದಿರನ್ನು ಪಡೆಯುವ ಭಾಗ್ಯ ದೊರಕಿತು. ಹರ್ಷಣ್ಣ, ದೇವಣ್ಣ, ಕರುಣಣ್ಣ, ಶ್ರೀನಿವಾಸಣ್ಣ ಮುಂತಾದವರು ಹಾಗೂ ಕುಸುಮಕ್ಕ, ಸುಮಂಗಲಕ್ಕ, ಪುಷ್ಪಕ್ಕ, ಜಯಲಕ್ಷ್ಮಿ ಅಕ್ಕ ಹೀಗೆ ಬಹಳಷ್ಟು ಅಣ್ಣಂದಿರು, ಅಕ್ಕಂದಿರು ಅಲ್ಲದೆ ಪ್ರದೀಪ್, ಅನಿಲ್, ಸಂತೋಷ್, ಶ್ರೀಕಾಂತ್, ರಘುವೀರ್ ತಮ್ಮಂದಿರು ಹಾಗೂ ಆರತಿ, ಭಾರತಿ, ಜಯಂತಿ, ವಸಂತಿ ಮುಂತಾದ ತಂಗಿಯಂದಿರು ಹೀಗೆ ಶ್ರೀ ಸಭಾಕ್ಕೆ ಸೇರಿದಂದಿನಿಂದ ನನ್ನ ಸಂಸಾರದ ವ್ಯಾಪ್ತಿ ವಿಸ್ತರಿಸುತ್ತಾ ಬಂದಿದೆ.

ನಮ್ಮೀ ಶ್ರೀ ಸುಬ್ರಹ್ಮಣ್ಯ ಸಭಾ ಬಹಳಷ್ಟು ಸಾಧನೆ ಮಾಡಿದೆ. ನಮ್ಮಲ್ಲಿ 140 ಮಂದಿ ಉಳಿದುಕೊಳ್ಳಬಹುದಾದ ಸುಸಜ್ಜಿತ ವಿದ್ಯಾರ್ಥಿ ವಸತಿನಿಲಯವಿದೆ. ಭವ್ಯ ಸಭಾಭವನವಿದೆ. ಪುತ್ತೂರಿನಲ್ಲಿ ಶಿವಸದನ ಎಂಬ ಸುಸಜ್ಜಿತ ಹಿರಿಯ ನಾಗರಿಕರ ವಸತಿನಿಲಯ ಹಾಗೂ ವಿಶೇಷಚೇತನರ ಆಶ್ರಯಧಾಮವಿದೆ. ಈ ಶಿವಸದನವು ಶ್ರೀ ಕರುಣ್ ರಾವ್ ಬೆಳ್ಳೆಯವರ ಮತ್ತು ಶ್ರೀಮತಿ ಸುಮಂಗಲ ಪ್ರಭಾಕರ್ ಇವರ ನೇತೃತ್ವದಲ್ಲಿ ಸುಸೂತ್ರವಾಗಿ ನಡೆಯುತ್ತಿದೆ. ಮೂರು ಕೋಟಿಗಿಂತಲೂ ಮಿಗಿಲಾದ ವಿದ್ಯಾನಿಧಿ ಇದೆ. ಪೊಳಲಿಯಲ್ಲಿ ಐದೂವರೆ ಎಕ್ರೆ ವಿಶಾಲ ನಿವೇಶನವಿದೆ. ಈ ಎಲ್ಲಾ ಹಿರಿಮೆ, ಸಾಧನೆಗಳ ಹಿಂದೆ ನೂರಾರು ಸಮಾಜ ಬಂಧುಗಳ ಪರಿಶ್ರಮ, ಕೊಡುಗೆ ಇದೆ. ಅವರನ್ನೆಲ್ಲ ಈ ಕ್ಷಣದಲ್ಲಿ ನೆನಪಿಸಿಕೊಂಡು ನಮಿಸುತ್ತಿದ್ದೇನೆ. ಈ ನಮ್ಮ ಸಭಾದ ಸರ್ವತೋಮುಖ ಪ್ರಗತಿಯಲ್ಲಿ ಶ್ರೀ ಕರುಣ್ ರಾವ್ ಬೆಳ್ಳೆಯವರ ಅಖಂಡ ಪರಿಶ್ರಮ ಮತ್ತು ತ್ಯಾಗಗಳನ್ನು ಇಲ್ಲಿ ದಾಖಲಿಸಲು ಸಂತೋಷಪಡುತ್ತೇನೆ. ದಿನದ 24 ಗಂಟೆಗಳಲ್ಲೂ ಊಟ, ಉಪಾಹಾರ ಅಲ್ಲದೆ ನಿದ್ರೆಯ ಸಮಯದಲ್ಲೂ ಸದನವನ್ನು ನಿರಂತರ ಜಪಿಸುತ್ತಾ, ಕನವರಿಸುತ್ತಾ ತಮ್ಮ ಬೆವರು, ರಕ್ತ ಮತ್ತು ಸಂಪತ್ತನ್ನು ಆವಿಯಾಗಿಸಿ ಈ ನಮ್ಮ ಸುಬ್ರಹ್ಮಣ್ಯ ಸಭಾವನ್ನು ಉನ್ನತ ಮಟ್ಟಕ್ಕೆ ತಂದಿರುವ ಕರುಣಣ್ಣನಿಗೆ ನಮ್ಮ ಅಭಿವಂದನೆಗಳು.

ಶ್ರೀ ಸುಬ್ರಹ್ಮಣ್ಯ ಸಭಾದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶ್ರೀ ಕರುಣ್ ರಾವ್ ಬೆಳ್ಳೆಯವರ ಕೊಡುಗೆ ಅಪಾರವಾದದ್ದು. ಶ್ರೀಯುತರ ಸಮಾಜಸೇವೆಗೆ ಪೂರಕವಾಗಿ ಸಹಕರಿಸಿದ ಅವರ ಸಹಧರ್ಮಿಣಿ ಶ್ರೀಮತಿ ಸುಜಾತ ಅವರಿಗೆ ಮತ್ತು ಅವರ ಮನೆಯವರಿಗೆ ಅತ್ಯಂತ ಆಭಾರಿಯಾಗಿದ್ದೇನೆ.

ಶ್ರೀ ಸಭೆಯ ದಕ್ಷ ಆಡಳಿತ ಮಂಡಳಿಯ ಎಲ್ಲಾ ಸದಸ್ಯರಲ್ಲಿ ನನಗೆ ವಿಶೇಷ ಗೌರವ ಮತ್ತು ಪ್ರೀತಿ–ವಿಶ್ವಾಸವಿದೆ. ಕಾರ್ಯದರ್ಶಿ ಶ್ರೀ ಉದಯ ಕುಮಾರ್ ಇವರು ಮೃದು ಹಾಗೂ ಮಿತಭಾಷಿ, ಸರಳ ವ್ಯಕ್ತಿ. ತಾನು ಕೈಗೆತ್ತಿಕೊಂಡ ಕೆಲಸವನ್ನು ಶಿಸ್ತುಬದ್ಧವಾಗಿ ಅಚ್ಚುಕಟ್ಟಾಗಿ Slow and Steady ಆಗಿ ಗುರಿಮುಟ್ಟಿಸುವ ಕರ್ಮಯೋಗಿ. ಬಹಳಷ್ಟು ಅನುಭವೀ ಉಪಾಧ್ಯಕ್ಷರಾದ ಶ್ರೀಮತಿ ಸುಮಂಗಲಾ ಪ್ರಭಾಕರ್ ಹಾಗೂ ಶ್ರೀ ಇನ್ನ ಚಂದ್ರಕಾಂತ ರಾವ್, ಬಹುಮುಖ ಪ್ರತಿಭೆಯ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಉಪಕಾರ್ಯದರ್ಶಿಗಳಾದ ಶ್ರೀ ಚೇತನ್ ಹಾಗೂ ಶ್ರೀ ಸಂತೋಷ್ ಇವರು ನಮ್ಮ ಸಾಧನೆಯ ಹಾದಿಯಲ್ಲಿ ಸಾಥಿಯಾಗಿರುತ್ತಾರೆ.

ಈ ದಿನ ಈ ಸಭಾಭವನದಲ್ಲಿ ಪಾರಾಯಣ ನಡೆಸಿಕೊಟ್ಟ ಹಾಗೂ ಭಜನೆಯ ಮೂಲಕ ಈ ಸಭಾಂಗಣದಲ್ಲಿ ದೈವಿಕ ಸಾನಿಧ್ಯವನ್ನು ಹೆಚ್ಚಿಸಿ, ಧಾರ್ಮಿಕ ವಾತಾವರಣವನ್ನು ನಿರ್ಮಿಸಿದ ಶ್ರೀ ಶಾಂಕರತತ್ವ ಪ್ರಸಾರ ಅಭಿಯಾನ ಮತ್ತು ಶ್ರೀ ಶಾರದಾಂಬ ಭಜನಾ ಮಂಡಳಿಯ ಸದಸ್ಯರಿಗೆ ಅಭಿನಂದನೆಗಳು.

ಶ್ರೀ ಸತ್ಯನಾರಾಯಣ ಸ್ವಾಮಿಯ ಆರಾಧನಾ ಮೂಲಕ ಶ್ರೀ ಸಭಾಕ್ಕೆ ದೇವರ ಅನುಗ್ರಹವನ್ನು ಕೊಡಮಾಡುವ ಪುರೋಹಿತ ಬ್ರಹ್ಮಶ್ರೀ ಶ್ರೀ ಸುಬ್ರಹ್ಮಣ್ಯ ಭಟ್ಟರಿಗೆ ವಂದನೆಗಳು. ಇಂದು ಸನ್ಮಾನಗೊಳ್ಳುತ್ತಿರುವ ಇಬ್ಬರು ಗಣ್ಯರಾದ ಶ್ರೀ ಹರೀಶ್ ಕುಮಾರ್ ವಿಟ್ಲ (Director, Technical Dept. Mescom, Mangalore) ಹಾಗೂ ವಿದ್ವಾನ್ ಕೆ. ಹೆಚ್. ರವಿಕುಮಾರ್ ಅವರನ್ನು ವಿಶೇಷವಾಗಿ ಗೌರವಿಸುತ್ತಿದ್ದೇವೆ.

ಶ್ರೀ ಸುಬ್ರಹ್ಮಣ್ಯ ಸಭೆಗೆ ಎರಡು ಬಲಿಷ್ಠ ಕೈಗಳಂತಿರುವ ಮಹಿಳಾ ವೇದಿಕೆ ಮತ್ತು ಯುವವೇದಿಕೆಗಳು ಆಕ್ಟಿವ್, ಪ್ರೋಆಕ್ಟಿವ್, ಕೆಲವೊಮ್ಮೆ ಹೈಪರ್ ಆಕ್ಟಿವ್ ಆಗಿ ಕಾರ್ಯನಿರ್ವಹಿಸುತ್ತಿದೆ ಎಂಬುದು ಸಂತಸದ ವಿಷಯ. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಜಯಂತಿ ವಿನೋದ್ ರಾವ್ ಮತ್ತು ಯುವವೇದಿಕೆಯ ಅಧ್ಯಕ್ಷ ಶ್ರೀ ಜನಕರಾಜ್ ಮತ್ತು ಅವರ ಬಳಗದ ಎಲ್ಲ ಸದಸ್ಯರಿಗೆ ಸುಸ್ವಾಗತ. ನಮ್ಮ ವಸತಿನಿಲಯ ಸಮಿತಿಯ ಅಧ್ಯಕ್ಷ CA ನಾಗರಾಜ ಶರ್ಮ ಹಾಗೂ ಛಾಯಾಗ್ರಾಹಕರಾದ ನಿರ್ದೇಶಕ ಶ್ರೀ ರಘುವೀರ್ ಇವರಿಗೆ ಪ್ರೀತಿಯ ಸ್ವಾಗತ.

ರೋಗಶಾಸ್ತ್ರವನ್ನು ಸರಳವಾಗಿ ವಿವರಿಸಿದ ನನ್ನ ಆತ್ಮೀಯರಾದ ಪ್ರೊಫೆಸರ್ ಡಾ. ಕೃಷ್ಣರಾಜ ಉಪಾಧ್ಯಾಯ ಹಾಗೂ ಬಳಗಕ್ಕೆ ಸ್ವಾಗತ. ಭೋಜನ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲಿರುವ ಬಂಧುಗಳಿಗೂ, ಸಮುದ್ರ ಮಥನ ಎಂಬ ಹರಿಕಥೆಯ ಮೂಲಕ ನಮ್ಮನ್ನು ರಂಜಿಸಲಿರುವ ಸಹೋದರಿಯರಾದ ವೈಷ್ಣವಿ ರಾವ್ ಹಾಗೂ ವೈಭವಿ ರಾವ್ ಅವರಿಗೂ ಆತ್ಮೀಯ ಸ್ವಾಗತ.

ಶ್ರೀ ಸುಬ್ರಹ್ಮಣ್ಯ ಸಭಾವು ಬಹಳಷ್ಟು ಸಾಧನೆಯನ್ನು ಮಾಡಿ ತನ್ನದೇ ಆದ ಸ್ಥಾನವನ್ನು, ವರ್ಚಸ್ಸನ್ನು ನಿರ್ಮಿಸಿಕೊಂಡಿದೆ. ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ. 'Grow or Perish' ನಾವು ಸಾಕಷ್ಟು ಬೆಳೆದಿದ್ದೇವೆ – ಇನ್ನು ಸಾಕು, ಹಾಗಂತ ವಿಶ್ರಾಂತಿ ಸಲ್ಲದು. ಇನ್ನಷ್ಟು ಸಾಧಿಸುವುದು ಇದೆ ಇನ್ನಷ್ಟು ಎತ್ತರಕ್ಕೆ (Sky is the limit) ಬೆಳೆಯುವುದಿದೆ.

ನಮ್ಮ ಪೊಳಲಿ ನಿವೇಶನದಲ್ಲಿ ಒಂದು ಸುಸಜ್ಜಿತವಾದ ವಸತಿ ಶಾಲೆಯನ್ನು, ಆರೋಗ್ಯಧಾಮದ ಸಂಕೀರ್ಣವನ್ನು, ಹಿರಿಯನಾಗರಿಕರ 'ನೆಮ್ಮದಿ ನೆಲೆ'ಯನ್ನು ಸ್ಥಾಪಿಸುವ ಕನಸಿದೆ. ಸಭಾಭವನಕ್ಕೆ ಲಿಫ್ಟ್ ಮತ್ತು ಹವಾನಿಯಂತ್ರಣ ಅಳವಡಿಕೆ ಈ ಎರಡು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಈ ಎಲ್ಲಾ ಕೆಲಸ ಕಾರ್ಯಗಳಿಗೆ ತಾವೆಲ್ಲರೂ ತನು–ಮನ–ಧನಗಳ ಸಹಕಾರವನ್ನು ನೀಡಬೇಕೆಂದು ಪ್ರಾರ್ಥನೆ.

**ಮುಂದಿನ ಶುಭಮುಂಜಾವಿನ ಹಾರೈಕೆಯೊಂದಿಗೆ ನಮಸ್ಕಾರ.**

PREETHIKA AUTOMOBILES
✆ 2493633 9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

*Manish Rao U.*
Tel : (O) 2223301
Mobile : 9448726499 / 8884284939
NAVA COMPUTERS

Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

## ‘ಶಿವಸದನ’ದಲ್ಲಿ ರಂಜಿಸಿದ ನೃತ್ಯರೂಪಕ ‘ಹರಿಪ್ರಸಾದ’



‘ಶಿವಸದನ’ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ, ಮುರ, ಪುತ್ತೂರು ಇಲ್ಲಿ ದಿನಾಂಕ 30–11–2025ನೇ ಆದಿತ್ಯವಾರ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಸಂಪನ್ನಗೊಂಡಿತು. ಶ್ರೀರಾಂ ಎಲ್ಲಂಗಳ ಮತ್ತು ಬಳಗದವರು ಕಾರ್ಯಕ್ರಮ ಗಾನ–ನಾಟ್ಯ–ಚಿತ್ರ ವೈಭವ ನಡೆಸಿಕೊಟ್ಟರು.

## ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘದ 12ನೇ ವರ್ಷದ ಕ್ರಿಕೆಟ್ ಪಂದ್ಯಾಕೂಟ

ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘವು ಕಳೆದ 11 ವರ್ಷಗಳಿಂದ ಕ್ರಿಕೆಟ್ ಪಂದ್ಯಾಕೂಟವು ನಮ್ಮ ಸಮಾಜ ಬಾಂಧವರಿಗಾಗಿ ನಡೆಸಿಕೊಂಡು ಬಂದಿರುತ್ತದೆ. 12ನೇ ವರ್ಷದ ಕ್ರಿಕೆಟ್ ಪಂದ್ಯಾಕೂಟವನ್ನು ತಾ. 11–01–2026ನೇ ಆದಿತ್ಯವಾರ NNPAT ಪಣಂಬೂರು ಕ್ರೀಡಾಂಗಣದಲ್ಲಿ ನಡೆಸುವುದಾಗಿ ತೀರ್ಮಾನಿಸಿದ್ದೇವೆ. ತಾವು ತಮ್ಮ ಸಮಾಜದ ಕ್ರಿಕೆಟ್ ತಂಡವನ್ನು ತಾ. 25–12–2025ರ ಒಳಗೆ ನಮ್ಮ ಸಂಘಟಕರಿಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇವೆ. ಪಂದ್ಯಾಕೂಟಕ್ಕೆ ಬರುವ ಆಟಗಾರರು ತಮ್ಮ ಆಧಾರ್‌ಪ್ರತಿಯನ್ನು ತರಬೇಕು.

**ಸಂಘಟಕರು :**

ಶ್ರೀ ಕಾರ್ತಿಕ್ ಎಸ್. ✆ : 9591662899
ಶ್ರೀ ಪ್ರವೀಣ ಕುಮಾರ್ ✆ : 9448953331
ಶ್ರೀ ಸಂದೀಪ್ ✆ : 9844630306

## ಪುತ್ತೂರು ‘ಶಿವಸದನ’ಕ್ಕೆ ದೇಣಿಗೆ



ಮಂಗಳೂರು ನಿವಾಸಿ ಸೂರಜ್ ಬಿ. ಮರೋಳಿಯವರ ಸ್ಮರಣಾರ್ಥ ಅವರ ವೈಕುಂಠ ಸಮಾರಾಧನೆಯ ಸಂದರ್ಭ ಪತ್ನಿ ಶ್ರೀಮತಿ ಯಶೋಧ ಸೂರಜ್, ಮಗಳಂದಿರಾದ ಶ್ರೀಮತಿ ಶಿಲ್ಪಾ ರಾವ್ ಮತ್ತು ಶ್ರೀಮತಿ ಶ್ವೇತಾ ರಾವ್ – ಅಳಿಯಂದಿರು ಶ್ರೀ ನಿರ್ಮಲ್ ರಾವ್ ಮತ್ತು ಶ್ರೀ ಚೇತನ್ ರಾವ್, ಮೊಮ್ಮಕ್ಕಳಾದ ಸಂಸ್ಕೃತಿ ರಾವ್, ಅನನ್ಯ ರಾವ್ ಮತ್ತು ಅರ್ಜುನ್ ರಾವ್ ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ ಶಿವಸದನಕ್ಕೆ ರೂ. 50,000/– ದೇಣಿಗೆ ನೀಡಿರುವರು. ಶಿವಸದನದ ಪರವಾಗಿ ಅವರಿಗೆ ಧನ್ಯವಾದಗಳು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

## ಸಾಲ ವಿದ್ಯಾರ್ಥಿವೇತನ ನಿಧಿ ಹೆಚ್ಚಳ



ಮಂಗಳೂರು ನಿವಾಸಿ ಕಾಂತಾವರ ದಿ| ಜಯಪ್ರಕಾಶ್ ಹಾಗೂ ಶ್ರೀಮತಿ ಶ್ರೀಲತಾ ಜಯಪ್ರಕಾಶ್ ದಂಪತಿಗಳು ತಮ್ಮ ಮದುವೆಯ ಸುವರ್ಣವಿವಾಹದ ನೆನಪಿಗಾಗಿ ‘ಶ್ರೀ ಕಾಂತಾವರ ಜಯಪ್ರಕಾಶ್ ಹಾಗೂ ಶ್ರೀಲತಾ ಜಯಪ್ರಕಾಶ್ ಗೋಲ್ಡನ್ ವೆಡ್ಡಿಂಗ್ ಲೋನ್ ಸ್ಕಾಲರ್‌ಶಿಪ್ ಫಂಡ್’ ಶ್ರೀ ಸುಬ್ರಹ್ಮಣ್ಯ ಚಾರಿಟೇಬಲ್ ಟ್ರಸ್ಟ್ ಮುಖಾಂತರ ವಿದ್ಯಾನಿಧಿಗೆ ರೂ. 30,000/– ನೀಡಿರುತ್ತಾರೆ. ಈ ಮೊದಲು ಇದ್ದ ರೂ. 3,35,000/– ಲಕ್ಷದ ನಿಧಿಯನ್ನು ರೂ. 3,65,000/– ಲಕ್ಷಕ್ಕೆ ಹೆಚ್ಚಿಸಿರುತ್ತಾರೆ. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅವರಿಗೆ ಅನಂತ ಧನ್ಯವಾದಗಳು.

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

Prop: Somashekhar
Mob: 9844551244
WONDER CREATION
Decor & Event planners
Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography
2T-145-3A, Kulai Gudde Road, Kulai, Surathkal

Anuraga Matrimony®
Exclusive Website for Brahmin Community
ಸ್ಮಾರ್ತ, ವೈಷ್ಣವ, ಶ್ರೀವೈಷ್ಣವ ಬ್ರಾಹ್ಮಣ ವಧು-ವರಾನ್ವೇಷಣೆಗಾಗಿ
www.anuragamatrimony.com
ಉಚಿತ ರಿಜಿಸ್ಟ್ರೇಶನ್
GET IT ON Google Play
Sudhashree
ಅನುರಾಗ ಮ್ಯಾಟ್ರಿಮೊನಿ
✓ ಮನೆಯಲ್ಲೇ ಕುಳಿತು ವಧು–ವರಾನ್ವೇಷಣೆ ಮಾಡಲು ಒಂದು ಸುವರ್ಣಾವಕಾಶ.
✓ ಸ್ಮಾರ್ತ–ಸ್ಥಾನಿಕ ಉಪಪಂಗಡದ ವಧು–ವರರ ಪ್ರತ್ಯೇಕ ಅನ್ವೇಷಣೆ ಸಾಧ್ಯ.
✓ ಎಲ್ಲಾ ವಯಸ್ಸು, ವಿದ್ಯಾರ್ಹತೆ, ಉದ್ಯೋಗಸ್ಥ ಹಾಗೂ ವಿಚ್ಛೇದಿತ ವಧು–ವರರಿಗೂ ಸದಸ್ಯತ್ವಕ್ಕೆ ಅವಕಾಶವಿದೆ.
✓ ವಧು–ವರರ ವಿದ್ಯಾರ್ಹತೆ, ಉದ್ಯೋಗ, ವಾಸಸ್ಥಳ ಹಾಗೂ ಇನ್ನಿತರೆ ವಿವರಗಳಿಂದ ವಿಂಗಡಿಸಬಹುದು.
● ಬೆಂಗಳೂರು ● ಮೈಸೂರು ● ಉಡುಪಿ ● ಹುಬ್ಬಳ್ಳಿ
1ನೇ ಮಹಡಿ, ಕೆನರಾ ಟವರ್, ಮಿಷನ್ ಆಸ್ಪತ್ರೆ ರಸ್ತೆ
ಉಡುಪಿ ಮೊಬೈಲ್ : 8105458755



# ಅಭಿನಂದನೆ



ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಮತ್ತು ಉಪನಿಷತ್ ಸಭಾ, ಕರ್ನಾಟಕ ಇವರು ನಡೆಸಿದ ಶೃಂಗೇರಿ ಶ್ರೀ ಸುರಸರಸ್ವತಿ ಸಭಾ ಪಠ್ಯ ಆಧಾರಿತ ಸಂಸ್ಕೃತ ತೃತೀಯ ಪರೀಕ್ಷೆಯಲ್ಲಿ ನಮ್ಮ ಸಮಾಜದವರೇ ಆದ **ಶ್ರೀಮತಿ ಭುವನೇಶ್ವರಿ ಉದಯ ಕುಮಾರ್,** ಕೊಟ್ಟಾರ ಕ್ರಾಸ್, ಮಂಗಳೂರು (ಅತ್ಯುನ್ನತ ಶ್ರೇಣಿ) ಮತ್ತು **ಶ್ರೀ ಶ್ರೀಧರ್ ರಾವ್,** ಲ್ಯಾಂಡ್ ಲಿಂಕ್ಸ್, ಮಂಗಳೂರು (ಪ್ರಥಮ ಶ್ರೇಣಿ)ಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಅಭಿನಂದನೆಗಳು.

# ಅಳಿದೆ ನಮ್ಮನೆ... ಇಳಿರುವುದು ಸುಮ್ಮನೆ...



ಪುತ್ತೂರಿನ ವಿವೇಕಾನಂದ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾದ ಕಬಕ ಶ್ರೀ ಸತೀಶ್ ರಾವ್ ಅವರ ಧರ್ಮಪತ್ನಿ **ಶ್ರೀಮತಿ ವೇದವಲ್ಲಿ** (63) ತಾ. 22-12-2025ನೇ ಸೋಮವಾರ ದೈವಾಧೀನರಾಗಿರುವರು. ಇವರು ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

ಜ್ಞಾನಶಕ್ತಿ ಪತ್ರಿಕೆಯು ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುತ್ತದೆ.

❖❖❖



**ಬೈಲೂರು ಜಗಜೀವನ ರಾವ್** (80) ಇವರು ತಾ. 5-12-2025ನೇ ಶುಕ್ರವಾರ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖❖❖



**ಸೂರಜ್ ಬಿ. ಮರೋಳಿ** (79) ತಾರೀಕು 1-12-2025ನೇ ಸೋಮವಾರ ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❖❖❖



**ಎಸ್. ವಿ. ರಾಘವ ಶಾಸ್ತ್ರೀ** (97) ತಾರೀಕು 7-12-2025ನೇ ರವಿವಾರ ಚಿಕ್ಕಬಳ್ಳಾಪುರದಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

❖❖❖



ಶಿವಸದನ ನಿವಾಸಿ **ಐ. ಮಾಧವ ರಾವ್** (75 ವರ್ಷ) ದಿ| ಉಂಡಾರು ಗೋವಿಂದರಾಯರ ಮಗ ಪುತ್ತೂರಿನ ಶಿವಸದನದಲ್ಲಿ ತಾ. 28-11-2025ನೇ ಶುಕ್ರವಾರ ನಿಧನರಾದರು.

❖❖❖



**ಮಸ್ಕಿಬೈಲು ಸತೀಶ್ ರಾವ್** (50) (ಅನಂತ ಪದ್ಮನಾಭ ರಾವ್) ತಾರೀಕು 27-11-2025ನೇ ಗುರುವಾರ ದೈವಾಧೀನರಾದರು.

❖❖❖



**ಶ್ರೀಮತಿ ಅಹಲ್ಯಮ್ಮ** (94) ಕೊಳ್ಳೇಗಾಲ ದಿ| ಲಕ್ಷ್ಮೀನಾರಾಯಣ ಇವರ ಪತ್ನಿ ತಾರೀಕು 30-11-2025ನೇ ರವಿವಾರ ನಿಧನರಾದರು.


❖❖❖



ಮಂಗಳೂರಿನ ಪ್ಲಾಂಟರ್ಸ್ ಲೇನ್ ನಿವಾಸಿ, ಕಲ್ಕೂರ ಪ್ರತಿಷ್ಠಾನ, ಬಲ್ಮಠ ಸರಕಾರಿ ಶಾಲಾ ಹಳೆ ವಿದ್ಯಾರ್ಥಿ ಸಂಘ, ಕದ್ರಿಯ ಸೌರಭ ಕಲಾವಿದರು ಸಂಸ್ಥೆಗಳ ಸಕ್ರಿಯ ಕಾರ್ಯಕರ್ತ **ಟಿ. ನಾಗರಾಜ್ ರಾವ್** (63) ತಾರೀಕು 3-12-2025ನೇ ಬುಧವಾರ ನಿಧನರಾದರು.

ರಾಜ್ಯಮಟ್ಟದ ಪೋಲ್‌ವಾಲ್ಟ್ ಪಟುವಾಗಿ ಕ್ರೀಡಾಕ್ಷೇತ್ರದಲ್ಲಿ, ರಂಗನಟರಾಗಿ ಅಭಿನಯ ಕ್ಷೇತ್ರದಲ್ಲಿ ಹಲವು ಬಹುಮಾನಗಳನ್ನು ಪಡೆದಿದ್ದರು. ದೇವದಾಸ್ ಕಾಪಿಕಾಡ್ ಅವರಿಂದ "ತೆಲಿಕೆದ ಬೊಳ್ಳಿ" ಪ್ರಶಸ್ತಿಯನ್ನೂ ಪಡೆದಿದ್ದರು. ತ್ರಿಶೂಲೇಶ್ವರ ಶ್ರೀನಿವಾಸ ರಾವ್ ಕುಟುಂಬದ ಗಣಪತಿ ಉತ್ಸವವನ್ನು ಶ್ರೀಯುತರು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು.

❖❖❖



**ಎಸ್. ಚಂದ್ರಶೇಖರ ರಾವ್** (83) ತಾರೀಕು 21-11-2025ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖❖❖



ಸುರತ್ಕಲ್ ಹೊಸಬೆಟ್ಟು ನಿವಾಸಿ **ಕಾಪು ಮಾಧವ ರಾವ್** (73) ನಿಧನರಾದರು. ಕೆಇಬಿಯಲ್ಲಿ ವಿವಿಧ ಶಾಖೆಗಳಲ್ಲಿ ಉದ್ಯೋಗಿಯಾಗಿದ್ದು, ಲೆಕ್ಕಪತ್ರ ಅಧಿಕಾರಿಯಾಗಿ ನಿವೃತ್ತರಾಗಿದ್ದ ಇವರು ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘದ ಸ್ಥಾಪಕ ಅಧ್ಯಕ್ಷರೂ ಆಗಿದ್ದು, ಜನಾನುರಾಗಿಗಳಾಗಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

# ಶುಭವಿವಾಹ

ಶ್ರೀಮತಿ ಉಮಾ ಮತ್ತು ಶ್ರೀ ವಾಗೀಶ ಎಸ್. ಶಾಸ್ತ್ರಿ ಇವರ ಪುತ್ರಿ **ಸೌ| ಗೌರಿ** ಹಾಗೂ ಶ್ರೀ ಲಕ್ಷ್ಮೀನಾರಾಯಣ ರಾವ್ ಕೆ. ಆರ್. ಕೋಲ್ಪೆ ಮತ್ತು ಶ್ರೀಮತಿ ಇಂದಿರಾ ಇವರ ಸುಪುತ್ರ **ಚಿ| ವರುಣ ವಾಸುದೇವ** ಇವರ ವಿವಾಹವು ತಾ. 01-12-2025ನೇ ಸೋಮವಾರ 'ಶ್ರೀ ಶಾರದಾ ಕಲ್ಯಾಣ ಮಂಟಪ', ಕುಂಜಿಬೆಟ್ಟು, ಉಡುಪಿಯಲ್ಲಿ ನೆರವೇರಿತು.

●●●

ಪಿರಿಯಾಪಟ್ಟಣ ಶ್ರೀ ಕರುಣಾಕರ ಮತ್ತು ಶ್ರೀಮತಿ ಸೀತಾಲಕ್ಷ್ಮೀಯವರ ಪುತ್ರ **ಚಿ| ಪ್ರಮೋದ್ ಕುಮಾರ್** ಹಾಗೂ ಆದ್ಯಪಾಡಿ ಶ್ರೀ ವಿಜಯ ಕುಮಾರ್ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀ ಇವರ ಪುತ್ರಿ **ಸೌ| ಶುಭಲಕ್ಷ್ಮೀ** ಇವರ ವಿವಾಹವು ತಾ. 30-11-2025ನೇ ರವಿವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನಡೆಯಿತು.

●●●

ಶ್ರೀಮತಿ ವಂದನಾ ಮತ್ತು ಶ್ರೀ ರಾಜರತ್ನಂ ಇವರ ಪುತ್ರ **ಚಿ| ಆದಿತ್ಯ** ಹಾಗೂ ಶ್ರೀಮತಿ ವೀಣಾ ಜೋಷಿ ಮತ್ತು ಶ್ರೀ ಗಣೇಶ್ ಜೋಷಿ ಇವರ ಪುತ್ರಿ **ಸೌ| ಮೇಘನಾ** ಇವರ ವಿವಾಹ ತಾ. 5-12-2025ನೇ ಶುಕ್ರವಾರ ಪುತ್ತೂರಿನ 'ಸ್ವಾಮಿ ಕಲಾಮಂದಿರ'ದಲ್ಲಿ ನಡೆಯಿತು.

●●●

ಶ್ರೀಮತಿ ಜ್ಯೋತಿ ಮತ್ತು ಶ್ರೀ ಪ್ರತಾಪಸಿಂಹ ನಾಯಕ್, ಇವರ ಸುಪುತ್ರಿ **ಸೌ| ಅನುಪಮಾ** ಹಾಗೂ ಶ್ರೀ ಧನಂಜಯ ರಾವ್ ಬಿ. ಕೆ. ಮತ್ತು ಶ್ರೀಮತಿ ರಾಜಶ್ರೀ ಧನಂಜಯ ರಾವ್ ಇವರ ಸುಪುತ್ರ **ಚಿ| ಮಿಹಿರ್ ಬಿ. ಕೆ.** ಇವರ ವಿವಾಹವು ತಾ. 23-11-2025ನೇ ರವಿವಾರ 'ಶ್ರೀ ಕೃಷ್ಣಾನುಗ್ರಹ ಸಭಾಭವನ', ಉಜಿರೆಯಲ್ಲಿ ನೆರವೇರಿತು.

●●●

ಶ್ರೀಮತಿ ಅನಿತಾ ಮತ್ತು ಕೀರ್ತಿಶೇಷ ಪ್ರಶಾಂತ್ ರಾವ್ ಎನ್. ಎಸ್. ಇವರ ಪ್ರಥಮ ಪುತ್ರಿ **ಸೌ| ಅನಘಾ ಪಿ. ರಾವ್** ಹಾಗೂ ಶ್ರೀ ರಾಜಶೇಖರ ರಾವ್ ಬಿ. ಕೆ. ಮತ್ತು ಶ್ರೀಮತಿ ಸುಗುಣ ಬಿ. ಕೆ. ಇವರ ಸುಪುತ್ರ **ಚಿ| ಪ್ರಿಯೇಶ್ ರಾವ್ ಬಿ. ಕೆ.** ಇವರ ವಿವಾಹವು ತಾ. 30-11-2025ನೇ ರವಿವಾರ 'ಶ್ರೀ ಹರಿಹರ ಅನುಗ್ರಹ ಸಭಾಭವನ', ಕನ್ಯಾಡಿ, ಉಜಿರೆಯಲ್ಲಿ ನೆರವೇರಿತು.

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216



Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
Swapna Vallish : 9972465209 / 7892235761

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works



ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಓಂ

# ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು

## ಸ್ಥಾನಿಕ ಬ್ರಾಹ್ಮಣ ಜಾಗತಿಕ ಸಮಾವೇಶ-2026

ದಿನಾಂಕ 24-01-2026, ಶನಿವಾರ ಮತ್ತು 25-01-2026, ಭಾನುವಾರ ● ಸ್ಥಳ : 'ಶಿವಕೃಪಾ ಸಭಾಭವನ', ಕಲ್ಲಾರೆ ಶ್ರೀಗುರು ರಾಘವೇಂದ್ರ ಮಠದ ಬಳಿ, ಪುತ್ತೂರು

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಅಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ, ಸರ್ವಸದಸ್ಯರು, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು





TO KNOW MORE CALL

8882 777 444

98807 42159 | 98450 84866 | 9611531026

sales@landtrades.in | www.landtrades.in

CRISIL Real Estate DA2 Developer Gradings

CREDAI MANGALORE


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* *Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*